

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–07–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದ ಪ್ರಸ್ತಾಪ ನಡೆಯುತ್ತಿತ್ತು. ಅವರ ಖಿಲಾಫತ್ ಕಾಲ ಹಿಜರೀ 13ರಿಂದ 23ರ ತನಕ ಸುಮಾರು ಹತ್ತುವರೆ ವರ್ಷಗಳದ್ದಾಗಿತ್ತು. ಆ ಕಾಲದ ವಿಜಯಗಳ ವೈಶಾಲ್ಯದ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಾಮ ಶಿಬ್ಲೀ ನುಮಾನಿ ಬರೆಯುತ್ತಾರೆ: ಹಝ್ರತ್ ಉಮರ್(ರ) ವಿಜಯ ಸಾಧಿಸಿದ ಪ್ರದೇಶಗಳ ಒಟ್ಟು ವಿಸ್ತೀರ್ಣ 22 ಲಕ್ಷ 51 ಸಾವಿರ 30 ಚದುರ ಮೈಲಾಗಿತ್ತು. ಹೀಗೆ ವಿಜಯ ಸಾಧಿಸಿದ ಪ್ರದೇಶಗಳಲ್ಲಿ ಸಿರಿಯ, ಈಜಿಪ್ಟ್, ಇರಾನ್, ಇರಾಕ್, ಖುಝಿಸ್ತಾನ್, ಆರ್ಮನಿಯ, ಅಝರ್‌ಬೈಜಾನ್, ಪರ್ಶಿಯ, ಕಿರ್‌ಮಾನ್, ಖುರಾಸಾನ್, ಮಕ್‌ರಾನ್ ಇತ್ಯಾದಿ ಸೇರಿವೆ.

ಹಝ್ರತ್ ಉಮರ್(ರ) ತನ್ನ ಸಕಲ ಕೆಲಸಗಳಲ್ಲಿ ಕಾರ್ಯನಿರತರಾಗಿದ್ದರೂ ಕೂಡ ಎಲ್ಲ ವಿಜಯಗಳ ಸಮಯದಲ್ಲಿ ಮುಸ್ಲಿಮರ ನಡುವೆ ಇದ್ದರು. ಅವರು ಯುದ್ಧಗಳಲ್ಲಿ ನೇರವಾಗಿ ಭಾಗಿಯಾಗದಿದ್ದರೂ ಮದೀನದಿಂದಲೇ ಮುಸ್ಲಿಮ್ ಕಮಾಂಡರ್‌ಗಳಿಗೆ ನಿರ್ದೇಶನಗಳನ್ನು ಕಳುಹಿಸುತ್ತಿದ್ದರು. ದಿನಾಲೂ ಅವರೊಂದಿಗೆ ಹಝ್ರತ್ ಉಮರ್(ರ) ಪತ್ರ ವ್ಯವಹಾರ ನಡೆಸುತ್ತಿದ್ದರು. ಹಝ್ರತ್ ಉಮರ್(ರ) ಮದೀನದಲ್ಲಿ ಇದ್ದುಕೊಂಡು ಮುಸ್ಲಿಮರಿಗೆ ಅವರ ಸೈನ್ಯಗಳನ್ನು ಕ್ರಮಪಡಿಸಲು ನಿರ್ದೇಶನಗಳನ್ನು ನೀಡುತ್ತಿದ್ದರು. ಹಝ್ರತ್ ಉಮರರ ಮುಂದೆ ಆ ಪ್ರದೇಶಗಳ ನಕ್ಷೆ ಇತ್ತು ಎಂಬಂತೆ ಅಥವಾ ಆ ಪ್ರದೇಶಗಳು ಅವರ ಮುಂದೆ ಇದೆ ಎಂಬ ರೀತಿಯಲ್ಲಿ ಅವರಿಗೆ ಆ ಪ್ರದೇಶಗಳ ಬಗ್ಗೆ ನಿರ್ದೇಶನಗಳನ್ನು ನೀಡುತ್ತಿದ್ದರು. ಸಹೀಹ್ ಬುಖಾರಿಯಲ್ಲಿ ಹಝ್ರತ್ ಉಮರ್(ರ)ರ ಕುರಿತು ಹೀಗೆ ಬರೆಯಲಾಗಿದೆ – ಹಝ್ರತ್ ಉಮರ್(ರ) ಹೇಳುತ್ತಿದ್ದರು: ನಾನು ನಮಾಝಿನಲ್ಲಿ ಇರುವಾಗಲೂ ನನ್ನ ಸೈನ್ಯವನ್ನು ತಯಾರು ಮಾಡುತ್ತಿರುತ್ತೇನೆ. ಎಂದರೆ ಅವರು ಎಷ್ಟು ಚಿಂತನೆಯಲ್ಲಿರುತ್ತಿದ್ದರು ಎಂದರೆ, ನಮಾಝಿನ ನಡುವೆ ಕೂಡ ಇಸ್ಲಾಮಿಕ ಸೈನ್ಯದ ಯೋಜನೆಯ ಕೆಲಸ ಜಾರಿಯಲ್ಲಿ ಇರುತ್ತಿತ್ತು. ಆ ವೇಳೆ ಅವರು ದುಆಗಳನ್ನು ಸಹ ಮಾಡುತ್ತಿದ್ದಿರಬಹುದು. ಇದೇ ಕಾರಣದಿಂದ ಅವರ ನಿರ್ದೇಶನಗಳನ್ನು ಅನುಸರಿಸುತ್ತಾ ಮುಸ್ಲಿಮ್ ಸೈನ್ಯಗಳು ಅತ್ಯಂತ ಕಠಿಣ ಸ್ಥಿತಿಗಳಲ್ಲೂ ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ವಿಜಯ ಗಳಿಸಿದ್ದನ್ನು ನಾವು ಕಾಣುತ್ತೇವೆ.

ಇರಾನ್ ಮತ್ತು ಇರಾಕ್ ವಿಜಯದ ಕುರಿತು ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಇರಾಕಿನ ಸೈನ್ಯಗಳ ಸೇನಾನಾಯಕತ್ವ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ಕೈಯಲ್ಲಿತ್ತು. ಆದರೆ ಅವರ ಖಿಲಾಫತ್ ಕಾಲದ ಕೊನೆಯಲ್ಲಿ, ಸಿರಿಯದಲ್ಲಿ ನಡೆಯುತ್ತಿದ್ದ ಯುದ್ಧಗಳ ಪ್ರಾಧಾನ್ಯತೆಯನ್ನು ಮನಗಂಡು ಅವರೊಡನೆ ಸಿರಿಯಕ್ಕೆ ಹೋಗಲು ಆದೇಶಿಸಿದರು ಮತ್ತು ಇರಾಕಿನ ನಾಯಕತ್ವವನ್ನು ಹಝ್ರತ್ ಮುಸ್ನಾ ಬಿನ್ ಹಾರಿಸರಿಗೆ ಒಪ್ಪಿಸಿದರು. ಹಝ್ರತ್ ಅಬೂಬಕರ್(ರ) ರೋಗಗ್ರಸ್ತರಾದಾಗ, ಇಸ್ಲಾಮಿಕ ಸೈನ್ಯಗಳಿಗೆ ಸಂದೇಶಗಳು ತಲುಪುವುದು ತಡವಾದಾಗ, ಹಝ್ರತ್ ಮುಸ್ನಾ ತನ್ನ ಪ್ರತಿನಿಧಿಯನ್ನು ನಿಶ್ಚಯಿಸಿ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಅಬೂಬಕರ್(ರ) ಹಝ್ರತ್ ಉಮರ್‌ರನ್ನು ಕರೆದರು ಮತ್ತು ಅವರು ಮೃತಪಟ್ಟ ಕೂಡಲೇ ಮುಸ್ಲಿಮರನ್ನು ಜಿಹಾದ್ ಮಾಡಲು ಪ್ರೇರೇಪಿಸಿ ಒಂದು ಸೈನ್ಯವನ್ನು ಹಝ್ರತ್ ಮುಸ್ನರೊಂದಿಗೆ ಕಳುಹಿಸಲು ಹಝ್ರತ್ ಉಮರ್(ರ)ರಿಗೆ ನಿರ್ದೇಶನ ಕೊಟ್ಟರು. ಹಝ್ರತ್ ಅಬೂಬಕರ್(ರ) ನಿಧನರಾದ ನಂತರ ಹಝ್ರತ್ ಉಮರ್(ರ) ನಿರಂತರ ಮೂರು ದಿನಗಳ ಕಾಲ ಉಪದೇಶ ಭಾಷಣ ಮಾಡಿದರು. ಆದರೆ ಇರಾನಿನ ವೈಭವ ಮತ್ತು ಪ್ರತಾಪದ ಕಾರಣದಿಂದ ಜನರು ಭಯಗೊಂಡಿದ್ದರು. ಹಝ್ರತ್ ಖಾಲಿದ್(ರ) ಇಲ್ಲದೇ ಇರಾಕಿನ ಮೇಲೆ ವಿಜಯ ಸಾಧಿಸುವುದು ಸಂಭವನೀಯವಲ್ಲವೆಂದು ಜನರು ಭಾವಿಸುತ್ತಿದ್ದರು. ಆದರೆ ನಾಲ್ಕನೇ ದಿನದ ಉಪದೇಶದ ನಂತರ ಜನರ ಹೃದಯಗಳು ಹೆದರಿದುವು. ಹೀಗೆ ಈ ಪ್ರೇರಣೆಯ ಪರಿಣಾಮವಾಗಿ ಐದು ಸಾವಿರದ ಸೈನ್ಯ ತಯಾರಾಯಿತು.

ಹಿಜರೀ 13ರಲ್ಲಿ ನುಮಾರಿಕ್ ಮತ್ತು ಕಸ್ಕರ್ ಎಂದು ಕರೆಯಲ್ಪಡುವ ಒಂದು ಯುದ್ಧ ನಡೆಯಿತು. ಅದರ ವಿವರಣೆ ಹೀಗಿದೆ: ಇರಾನಿನಲ್ಲಿ ಆಸ್ಥಾನಮುಖಂಡರ ಪರಸ್ಪರ ಭಿನ್ನಾಭಿಪ್ರಾಯಗಳ ಕಾರಣ ಕಷ್ಟತೆಗಳಿಗೆ ಗುರಿಯಾಗಿತ್ತು. ಇಂತದ್ದರಲ್ಲಿ ರುಸ್ತಮಿನ ರೂಪದಲ್ಲಿ ಒಬ್ಬ ಹೊಸ ವ್ಯಕ್ತಿಯು ಬೆಳಕಿಗೆ ಬರುತ್ತಾನೆ. ಅವನನ್ನು ಬೇಗನೇ ಇರಾನಿನ ಆಸ್ಥಾನದಲ್ಲಿ ಕಪ್ಪು ಮತ್ತು ಬಿಳಿ ಜನರ ಸರದಾರರನ್ನಾಗಿ ಮಾಡಲಾಯಿತು. ರುಸ್ತಮ್ ಒಬ್ಬ ಧೈರ್ಯಶಾಲಿ ಮತ್ತು ತಂತ್ರಶಾಲಿ ವ್ಯಕ್ತಿಯಾಗಿದ್ದನು. ಮುಸ್ಲಿಮರು ವಿಜಯ ಸಾಧಿಸಿದ ಪ್ರದೇಶಗಳಲ್ಲಿ ಅವನು ತನ್ನ ಜನರ ಮೂಲಕ ಬಂಡಾಯ ಎಬ್ಬಿಸಿದನು ಮತ್ತು ಹಝ್ರತ್ ಮುಸ್ನಾರನ್ನು ಎದುರಿಸಲಿಕ್ಕಾಗಿ ಒಂದು ಸೈನ್ಯವನ್ನು ರವಾನೆ ಮಾಡಿದನು. ಈ ಸ್ಥಿತಿಯಲ್ಲಿ ಹಿಂದಕ್ಕೆ ಸರಿಯುವುದೇ ಸರಿ ಎಂದು ಹಝ್ರತ್ ಮುಸ್ನಾ ಭಾವಿಸಿದರು. ಮತ್ತೊಂದು ಕಡೆ ರುಸ್ತಂ ತನ್ನ ಸಿದ್ಧತೆಯನ್ನು ಜಾರಿಯಲ್ಲಿರಿಸಿದನು ಮತ್ತು ಒಂದು ಶಕ್ತಿಶಾಲಿ

ಸೈನ್ಯವನ್ನು ತಯಾರುಮಾಡಿ ಎರಡು ಬೇರೆ ಬೇರೆ ಮಾರ್ಗಗಳಿಂದ ಮುಸ್ಲಿಮರ ವಿರುದ್ಧ ಹೋರಾಡಲು ರವಾನೆ ಮಾಡಿದನು. ಒಂದು ಸೈನ್ಯವು ಜಾಬಾನಿನ ನೇತೃತ್ವದಲ್ಲಿ ಕೂಫದ ಸಮೀಪದ ನುಮಾರಿಖ ಎಂಬ ಸ್ಥಳಕ್ಕೆ ತಲುಪಿತು. ಮತ್ತೊಂದು ಸೈನ್ಯವು ನರ್ಸಿಯ ನಾಯಕತ್ವದಲ್ಲಿ ಕಸ್ಕರಿಗೆ ತಲುಪಿತು. ಬಗ್ದಾದ್ ಮತ್ತು ಬಸ್ರದ ನಡುವೆ ದಜ್ಲ ನದಿಯ ಪಶ್ಚಿಮ ದಡದಲ್ಲಿ ಕಸ್ಕರಿನ ಪಟ್ಟಣವು ನೆಲೆಸಿತ್ತು. ನುಮಾರಿಖಿನಲ್ಲಿ ಹಝ್ರತ್ ಅಬೂಉಬೈದ ಮತ್ತು ಜಾಬಾನನ ಸೈನ್ಯಗಳು ಮುಖಾಮುಖಿಯಾದುವು. ಒಂದು ಪ್ರಚಂಡ ಯುದ್ಧ ನಡೆಯಿತು. ಅದರಲ್ಲಿ ಇರಾನಿನ ಸೈನ್ಯ ಸೋತು ಹೋಯಿತು. ಇಲ್ಲಿ ಇಸ್ಲಾಮಿಕ ನೈತಿಕ ಗುಣದ ಒಂದು ಅತ್ಯುನ್ನತ ಮಾದರಿ ಕಾಣಲು ಸಿಗುತ್ತದೆ. ಇರಾನಿನ ಸೈನ್ಯದಲ್ಲಿ ಬಾದಶಾಹನಂತಹ ಸ್ಥಾನವನ್ನು ಪಡೆದಿದ್ದ ಜಾಬಾನ್ ಬಂಧಿಯಾದನು. ಅವನನ್ನು ಬಂಧಿಸಿದ ಸಿಪಾಯಿಗಳಿಗೆ ಅವನ ಪರಿಚಯವಿರಲಿಲ್ಲ. ಅದರಿಂದ ಪ್ರಯೋಜನ ಪಡೆಯುತ್ತಾ ಅವನು ಮೌನವಾಗಿ ಪರಿಹಾರ ಧನವನ್ನು ಪಾವತಿಸಿ ಬಿಡುಗಡೆ ಪಡೆದನು. ಇತರ ಮುಸ್ಲಿಮರಿಗೆ ಈ ಸುದ್ದಿ ತಲುಪಿದಾಗ ಅವರು ಜಾಬಾನನ್ನು ಪುನಃ ಬಂಧಿಸಿದರು. ಆದರೆ ಯಾವ ವ್ಯಕ್ತಿಯನ್ನು ಮುಸ್ಲಿಮರ ಸಿಪಾಯಿಗಳು ಒಂದು ಬಾರಿ ಫಿದ್‌ಯ ಪಡೆದು ಬಿಡುಗಡೆಗೊಳಿಸಿದರೋ ಅವನನ್ನು ಪುನಃ ಬಂಧಿಸುವುದನ್ನು ಹಝ್ರತ್ ಅಬೂ ಉಬೈದ ಸಹಿಸಲಿಲ್ಲ. ಹೀಗೆ ಮುಸ್ಲಿಮರು ಪ್ರಚಂಡ ಯುದ್ಧದಿಂದ ಪ್ರಯೋಜನಗಳನ್ನು ಪಡೆಯಲಿಕ್ಕಾದರೂ ಶ್ರೇಷ್ಠ ಮಟ್ಟದ ಸ್ವಭಾವಗುಣಗಳನ್ನು ಕೈಬಿಡಲಿಲ್ಲ.

ಹಿಜರೀ 13ರಲ್ಲಿ ಸಖಾತಿಯ ಯುದ್ಧ ನಡೆಯಿತು. ನುಮಾರಿಖಿನಲ್ಲಿ ಸೋಲನುಭವಿಸಿ ಇರಾನಿನ ಸೈನ್ಯ ಕಸ್ಕರಿನ ಕಡೆಗೆ ಓಡಿಹೋಯಿತು. ಅಲ್ಲಿ ಇರಾನಿನ ಕಮಾಂಡರ್ ಆದ ನರ್ಸಿ ಮೊದಲೇ ಒಂದು ಸೈನ್ಯದೊಂದಿಗೆ ಮುಸ್ಲಿಮರನ್ನು ಎದುರಿಸಲು ತಯಾರಾಗಿದ್ದನು. ಅಲ್ಲಿ ಸಖಾತಿಯದ ಮೈದಾನದಲ್ಲಿ ಒಂದು ಪ್ರಚಂಡ ಯುದ್ಧದ ನಂತರ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರಿಗೆ ವಿಜಯ ಲಭಿಸಿತು.

ಬಾರೂಸಮಾ ಯುದ್ಧ ಸಹ ಹಿಜರೀ 13ರಲ್ಲಿ ನಡೆಯಿತು. ಈ ಪ್ರದೇಶ ಕಸ್ಕರ್ ಮತ್ತು ಸಖಾತಿಯದ ನಡುವೆ ಇತ್ತು. ಅಲ್ಲಿ ಇರಾನಿನ ಸೇನಾಧಿಪತಿ ಜಾಲಿನೂಸ್‌ನೊಡನೆ ಮುಖಾಮುಖಿ ಯಾಯಿತು. ಬಸ್ರ ಮತ್ತು ಕೂಫದ ನಡುವೆ ಇರುವ ಪ್ರದೇಶಗಳನ್ನು **ಅರ್‌ಝೇ ಸುವಾದ್** ಎಂದು ಹೇಳಲಾಗುತ್ತದೆ. ಬಾರೂಸಮಾ ಮತ್ತು ಬಾಖುಸಿಯಾಸ ಆ ಪ್ರದೇಶದ ಎರಡು ಗ್ರಾಮಗಳಾಗಿವೆ. ಅಬೂ ಉಬೈದ ಬಾಖುಸಿಯಾಸಾ ತಲುಪಿದರು ಮತ್ತು ಸಣ್ಣದಾದೊಂದು ಯುದ್ಧದ ನಂತರ ಇರಾನಿ ಸೈನ್ಯ ಪರಾಜಯಗೊಂಡಿತು.

ಹಿಜರೀ 13ರಲ್ಲಿ ಫರಾತ್ ನದಿಯ ದಡದಲ್ಲಿ ಮುಸ್ಲಿಮರು ಮತ್ತು ಇರಾನಿಯರ ನಡುವೆ ಜಿಸರ್ ಯುದ್ಧ ನಡೆಯಿತು. ಅಬೂ ಉಬೈದ ಸಖ್‌ಫಿ ಮುಸ್ಲಿಮರ ಸೇನಾಧಿಪತಿಯಾಗಿದ್ದರು. ಬಹ್ಮನ್ ಜಾಝ್‌ವಿಯ ಇರಾನಿನ ಸೇನಾಧಿಪತಿಯಾಗಿದ್ದನು. ಮುಸ್ಲಿಮರ ಸೈನ್ಯಬಲ ಹತ್ತು ಸಾವಿರ ಸೈನಿಕರದ್ದಾಗಿತ್ತು. ಇರಾನಿನ ಸೈನ್ಯ ಮೂವತ್ತು ಸಾವಿರ ಸಿಪಾಯಿಗಳನ್ನು ಒಳಗೊಂಡಿತ್ತು. ಮಾತ್ರವಲ್ಲ ಇರಾನಿನ ಸೈನ್ಯದಲ್ಲಿ 300 ಆನೆಗಳು ಸಹ ಇದ್ದುವು. ಫರಾತ್ ನದಿಯು ಮಧ್ಯದಲ್ಲಿ ಇರುವ ಕಾರಣದಿಂದ ಉಭಯ ಸೈನ್ಯಗಳು ಯುದ್ಧ ಮಾಡದೇ ನಿಂತಿದ್ದುವು. ಅನಂತರ ಉಭಯ ಪಕ್ಷಗಳ ಸಮ್ಮತಿಯಿಂದ ಫರಾತ್ ನದಿಯ ಮೇಲೆ ಒಂದು ಸೇತುವೆಯನ್ನು ತಯಾರು ಮಾಡಲಾಯಿತು. ಜಿಸರ್ ಎಂದರೆ ಸೇತುವೆ ಎಂದಾಗಿದೆ. ಆದರಿಂದಲೇ ಈ ಯುದ್ಧವನ್ನು ಜಿಸರ್ ಯುದ್ಧವೆಂದು ಕರೆಯಲಾಗಿದೆ. ಸೇತುವೆ ತಯಾರಾದ ನಂತರ ಹಝ್ರತ್ ಅಬೂಉಬೈದ ನದಿಯನ್ನು ಪಾರು ಮಾಡಿ ಪೇರ್ಶಿಯನ್ ಸೈನ್ಯದ ಮೇಲೆ ಹಲ್ಲೆ ನಡೆಸಿದರು. ಈ ಆಕ್ರಮಣದ ಪರಿಣಾಮವಾಗಿ ಆರಂಭದಲ್ಲಿ ಇರಾನಿನ ಸೈನ್ಯ ಚದುರಿ ಹೋಗುತ್ತಿತ್ತು. ಆದಾಗ್ಯೂ ಬಹ್ಮನ್ ಜಾಝ್‌ವಿಯ ತನ್ನ ಆನೆಗಳನ್ನು ಮುಂದಕ್ಕೆ ತಂದಾಗ ಮುಸ್ಲಿಮರ ಪಂಕ್ತಿಗಳು ಅಸ್ತವ್ಯಸ್ತಗೊಂಡವು. ಆಗ ಆನೆಗಳ ಸೊಂಡಿಲುಗಳನ್ನು ಕತ್ತರಿಸಲು ಹಝ್ರತ್ ಅಬೂಉಬೈದ ಆದೇಶಿಸಿದರು ಮತ್ತು ಸ್ವತಃ ಮುಂದಕ್ಕೆ ಧಾವಿಸಿ ಒಂದು ಆನೆಯ ಸೊಂಡಿಲನ್ನು ಮುರಿದರು. ಸೈನ್ಯದ ಇತರ ಮುಸ್ಲಿಮರು ಸಹ ಅದರಂತೆ ಮಾಡಿದರು. ಘೋರ ಯುದ್ಧ ನಡೆಯಿತು. ಹಝ್ರತ್ ಅಬೂಉಬೈದ ಅಲ್ಲದೇ ಆರು ವ್ಯಕ್ತಿಗಳು ಇಸ್ಲಾಮಿನ ಸೈನ್ಯದ ಧ್ವಜವನ್ನು ಹಿಡಿಯುತ್ತಾ ಒಬ್ಬರ ನಂತರ ಇನ್ನೊಬ್ಬರಂತೆ ಶಹೀದ್ ಆಗುತ್ತಾ ಹೋದರು. ಎಂಟನೇ ಕಮಾಂಡರ್ ಹಝ್ರತ್ ಮುಸ್ನಾ ಆಗಿದ್ದರು. ಅವರು ಇಸ್ಲಾಮಿನ ಸೈನ್ಯವನ್ನು ಪುನಃ ಕ್ರಮಪಡಿಸಿ ಶಕ್ತವಾದ ಆಕ್ರಮಣ ನಡೆಸಿದರು. ಹಝ್ರತ್ ಮುಸ್ನಾ ಗಾಯಾಳಾದರು. ಆದರೆ ಧೈರ್ಯದಿಂದ ಹೋರಾಡುತ್ತಾ ಫರಾತ್ ನದಿಯನ್ನು ಪಾರು ಮಾಡಿ ಮರಳಿಬಂದರು. ಈ ಯುದ್ಧದಲ್ಲಿ ಮುಸ್ಲಿಮರ ನಾಲ್ಕು ಸಾವಿರ ಜನರು ಹುತಾತ್ಮರಾದರು. ಅದೇ ವೇಳೆ ಇರಾನಿಯರ ಆರು ಸಾವಿರ ಜನರು ಕೊಲ್ಲಲ್ಪಟ್ಟರು. ಇರಾನಿನ ದರ್ಬಾರಿನ ಸಭಿಕರ ನಡುವೆ ಭಿನ್ನಾಭಿಪ್ರಾಯವೆದ್ದಿತು ಮತ್ತು ಬಹ್ಮನ್ ಜಾಝ್‌ವಿಯಗೆ ಮರಳಿ ಹೋಗಬೇಕಾಯಿತು. ಈ ರೀತಿಯಲ್ಲಿ ಈ ಯುದ್ಧದ ದುಷ್ಪರಿಣಾಮಗಳಿಂದ ಮುಸ್ಲಿಮರು ಸುರಕ್ಷಿತರಾದರು.

ಹಝ್ರತ್ ಮುಸ್ಲಿಹ್ ಮೌಲೂದ್(ರ) ಸಹ ಜಿಸರ್ ಯುದ್ಧದ ಬಗ್ಗೆ ಸ್ವಲ್ಪಮಟ್ಟಿಗೆ ಹೀಗೆ ಪ್ರಸ್ತಾಪಿಸಿರುವರು: ಇಸ್ಲಾಮಿಗೆ ಅನುಭವಿಸಬೇಕಾಗಿ ಬಂದ ಅತ್ಯಂತ ದೊಡ್ಡ ಮತ್ತು ಭಯಾನಕ ಸೋಲು ಜಿಸರ್ ಯುದ್ಧದಲ್ಲಾಗಿತ್ತು. ಮುಸ್ಲಿಮರ ಈ ನಷ್ಟ ಎಷ್ಟು ಅಪಾಯಕಾರಿಯಾಗಿತ್ತು ಎಂದರೆ, ಮದೀನ ತನಕ ಇದರಿಂದ ನಡುಗಿತು. ಹಝ್ರತ್ ಉಮರ್(ರ) ಮದೀನದ ನಿವಾಸಿಗಳನ್ನು ಒಟ್ಟುಸೇರಿಸಿದರು ಮತ್ತು ಹೀಗೆ ಹೇಳಿದರು: ಈಗ ಮದೀನ ಮತ್ತು ಇರಾನಿನ ನಡುವೆ ಯಾವುದೇ ತಡೆಯಿಲ್ಲ. ಮದೀನ ಈಗ ಪೂರ್ಣವಾಗಿ ಅಸುರಕ್ಷಿತವಾಗಿದೆ ಮತ್ತು ಶತ್ರುಗಳು ಕೆಲವೇ ದಿನಗಳಲ್ಲಿ ಇಲ್ಲಿಗೆ ತಲುಪುವ ಸಾಧ್ಯತೆಯಿದೆ. ಆದ್ದರಿಂದ ನಾನು ಸ್ವತಃ ಸೇನಾಧಿಪತಿಯಾಗಿ ಹೋಗಲು ಬಯಸುತ್ತೇನೆ. ಇತರ ಜನರು ಈ ಅಭಿಪ್ರಾಯವನ್ನು ಇಷ್ಟಪಟ್ಟರು. ಆದರೆ ಹಝ್ರತ್ ಅಲಿ(ರ) ಹೇಳಿದರು: "ಒಂದು ವೇಳೆ ನಿಮಗೇನಾದರೂ ಸಂಭವಿಸಿದರೆ ಮುಸ್ಲಿಮರು ಚದುರಿಹೋಗುವರು. ಅವರ ಲಾಡಿ ಸಂಪೂರ್ಣವಾಗಿಯೂ ಪಸರಿಸುವುದು. ಆದ್ದರಿಂದ ಬೇರೆ ಯಾರನ್ನಾದರೂ ಕಳುಹಿಸಬೇಕು. ನೀವು ಸ್ವತಃ ಹೋಗಬೇಡಿರಿ." ಆಗ ಸಿರಿಯದಲ್ಲಿ ರೋಮನ್ನರ ವಿರುದ್ಧ ಯುದ್ಧದಲ್ಲಿ ನಿರತರಾಗಿದ್ದ ಹಝ್ರತ್ ಸಅದ್(ರ)ರಿಗೆ ಹಝ್ರತ್ ಉಮರ್(ರ) ಹೀಗೆ ಪತ್ರ

ಬರೆದರು: “ಸಾಧ್ಯವಾದಷ್ಟು ಸೈನಿಕರನ್ನು ಇಲ್ಲಿಗೆ ಕಳುಹಿಸಿರಿ. ಏಕೆಂದರೆ ಈಗ ಮದೀನ ಪೂರ್ಣವಾಗಿಯೂ ಅಸುರಕ್ಷಿತಗೊಂಡಿದೆ. ಶತ್ರುಗಳನ್ನು ಬೇಗನೇ ತಡೆಯದಿದ್ದರೆ ಮದೀನವನ್ನು ಅವರು ವಶಪಡಿಸುವರು.”

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹರು ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು:)

ಸನ್ಮಾನ್ಯ ಫತೀಹೀ ಅಬ್ದುಸ್ಸಲಾಂ ಮುಬಾರಕ್ ಸಾಹಿಬ್: ಇವರು ಈಜಿಪ್ಟಿನವರಾಗಿದ್ದರು. ಅವರು ಕೆಲವು ದಿನಗಳ ಹಿಂದೆ 75ನೇ ವಯಸ್ಸಿನಲ್ಲಿ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರ ತಂದೆ ನಖ್ಷಬಂಧಿ ವಿಭಾಗದವರಾಗಿದ್ದರು. ಅವರಿಗೆ ಅಲ್ಲಾಹನ ಅನುಗ್ರಹದಿಂದ 88ನೇ ವಯಸ್ಸಿನಲ್ಲಿ ಬೈಅತ್ ಮಾಡುವ ಸೌಭಾಗ್ಯ ಸಿಕ್ಕಿತು. ಫತೀಹಿ ಸಾಹಿಬ್‌ರು ಹತ್ತನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದರು. ಖಾಹಿರ ಯೂನಿವರ್ಸಿಟಿಯಿಂದ ಇಂಜಿನಿಯರಿಂಗ್‌ನಲ್ಲಿ ಡಿಗ್ರಿ ಮಾಡಿದರು. 1998ರಲ್ಲಿ ಸನ್ಮಾನ್ಯ ಮುಸ್ತಫಾ ಸಾಬಿತ್ ಸಾಹಿಬ್‌ರ ಮೂಲಕ ಅವರಿಗೆ ಅಹ್ಮದಿಯ್ಯತ್ತಿನ ಅಧ್ಯಾಪನೆಗಳ ಪರಿಚಯವಾಯಿತು. ಪೂರ್ಣವಾದ ರೀತಿಯಲ್ಲಿ ಓದಿದ, ಚಿಂತನ ಮಂಥನ ಮಾಡಿದ ಮತ್ತು ದುಆ ಮಾಡಿದ ನಂತರ 2001ರಲ್ಲಿ ಹಝ್ರತ್ ಮಸೀಹ್ ಮೌಊದ್‌ರನ್ನು ಇಮಾಂ ಮಹ್‌ದಿಯಾಗಿ ಸ್ವೀಕರಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು.

ಫತೀಹ್ ಸಾಹಿಬ್‌ರಿಗೆ ಅನೇಕ ಜ್ಞಾನಪರವಾದ ಸೇವೆಗಳನ್ನು ಮಾಡಲು ಸೌಭಾಗ್ಯ ಸಿಕ್ಕಿತ್ತು. ಪುಸ್ತಕಗಳನ್ನು ತರ್ಜುಮೆ ಮಾಡಿದರು, ಎಂ.ಟಿ.ಎ. ಅಲ್‌ಅರಬಿಯದ ಪ್ರೋಗ್ರಾಮುಗಳಲ್ಲಿ ಭಾಗವಹಿಸಿದರು. ಲೋಕಲ್ ಜಮಾಅತಿನಲ್ಲಿ ಒಂದು ದೀರ್ಘ ಕಾಲ ಸೆಕ್ರಟರಿ ತಬ್ಲೀಗ್ ಆಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ), ಅಹ್ಮದಿಯಾ ಖಿಲಾಫತ್ ಮತ್ತು ಖಾದಿಯಾನಿನೊಂದಿಗೆ ಆಳವಾದ ಪ್ರೇಮವನ್ನು ಇರಿಸಿದ್ದರು. **ಯದ್‌ಊನ ಲಕ ಅಬ್ದಾಲುಶ್ಶಾಮಿ ವ ಇಬಾದಲ್ಲಾಹಿ ಮಿನಲ್ ಅರಬ್** ಎಂಬುದು ಹಝ್ರತ್ ಮಸೀಹ್ ಮೌಊದ್‌ರಿಗೆ ಲಭಿಸಿದ ಒಂದು ಇಲ್‌ಹಾಂ ಆಗಿತ್ತು. ಎಂದರೆ ನಿನಗಾಗಿ ಸಿರಿಯದ ದಾಸರು ದುಆ ಮಾಡುವರು ಮತ್ತು ಅರೇಬಿಯದ ದಾಸರು ಸಹ ದುಆ ಮಾಡುತ್ತಾರೆ. ಈ ಸಂಗತಿ ಏನು, ಯಾವಾಗ ಮತ್ತು ಹೇಗೆ ಪ್ರಕಟವಾಗುವುದು ಎಂದು ಅಲ್ಲಾಹನೇ ಬಲ್ಲನು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದರು. ಆದರೆ ಎಲ್ಲೆಲ್ಲ ಅರೇಬಿಯದಲ್ಲಿ ಜಮಾಅತುಗಳು ಸ್ಥಾಪಿತವಾಗುತ್ತಿವೆಯೋ ಅಲ್ಲೆಲ್ಲ ಫತೀಹ್ ಸಾಹಿಬ್‌ರಂತಹ ನಿಷ್ಠಾವಂತರನ್ನು ಅಲ್ಲಾಹನು ಉಂಟುಮಾಡುತ್ತಿದ್ದಾನೆ ಎಂದು ನಾವು ಈಗ ನೋಡುತ್ತಿದ್ದೇವೆ.

(ಅದಲ್ಲದೇ ಕೆನಡ ಮತ್ತು ಸಿರಾಲಿಯೋನಿನ ಮಾಜಿ ಮುಬಲ್ಲಿಗ್ ಇನ್‌ಚಾರ್ಜ್ ಆದ ಖಲೀಲ್ ಮುಬಶ್ಶಿರ್ ಅಹ್ಮದ್ ಸಾಹಿಬ್‌ರ ಪತ್ನಿ ರಝಿಯ ಬೇಗಂ ಸಾಹಿಬ, ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರ ಪತ್ನಿಯಾದ ಸಾಯಿರ ಸುಲ್ತಾನ್ ಸಾಹಿಬ, ಸಿರಿಯದ ಸನ್ಮಾನ್ಯ ಗಸ್‌ವಾನುಲ್‌ಮಆಝ್‌ಮಾನಿ ಸಾಹಿಬ ಇವರ ಬಗ್ಗೆ ಪ್ರಸ್ತಾಪಿಸಿದ ನಂತರ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 16-07-2021*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon